OS 77/2024
PW-01

<u>ದಿನಾಂಕಃ 03-03-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರವಾಗಿ ಶ್ರೀ DBC ಮಾನ್ಯ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನ್ನ ಮದುವೆಯು ಈಗ್ಗೆ 25 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆಯಾದ ಸಂದರ್ಭದಲ್ಲಿ ನನ್ನ ಯಜಮಾನರ ತಂದೆ ಜೀವಂತ ಇದ್ದರು. ನಾನು ಮೂರು ಹೊಲಗಳ ಮೇಲೆ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದು ಆದರೆ ನನಗೆ ಅವುಗಳ ಸರ್ವೆ ನಂಬರ ಗೊತ್ತಿರುವುದಿಲ್ಲ. ಈ ದಿನ ನಾನು ಹಾಗೂ ನನ್ನ ಯಜಮಾನರು ಈ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ಮೊದಲು 1 ನೇ ಪ್ರತಿವಾದಿ ಈ ನ್ಯಾಯಾಲಯಕ್ಕೆ ಪ್ರಸ್ತುತ ಪ್ರಕರಣದಲ್ಲಿ ಹಾಜರಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ 25-30 ವರ್ಷಗಳ ಹಿಂದೆ ಪಾಲು ಆಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತು ಸ.ನಂ.138/1 ರಲ್ಲಿ ನಾನೇ ಉತ್ತುವುದು ಮತ್ತು ಬೆಳೆಯುವುದು ಮಾಡುತ್ತೇನೆ ಎಂದರೆ ಸರಿ. ದಾವಾ ಸ್ವತ್ತು ಸ.ನಂ. 52 ನ್ನು 1 ನೇ ಪ್ರತಿವಾದಿ ಸದರಿ ಪಾಲು ಆದ ನಂತರ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದರೆ ನಾವೆಲ್ಲರೂ ಒಟ್ಟಿಗೆ ಇರುವಾಗ ಅದನ್ನು ಖರೀದಿ ಮಾಡಿರುತ್ತೇವೆ. ದಾವಾ ಸ್ವತ್ತು ಸ.ನಂ.52 ನ್ನು 1 ನೇ ಪ್ರತಿವಾದಿ ಸದರಿ ಪಾಲು ಆದ ನಂತರ ಖರೀದಿ ಮಾಡಿದ್ದರಿಂದ ನನಗೂ ಹಾಗೂ 2 ನೇ ಪ್ರತಿವಾದಿಗೆ ಅದರ ಮೇಲೆ ಯಾವುದೇ ಹಕ್ಕು ಭಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿಯ ವಿಚಾರ ನನಗೆ ತಿಳಿದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಈ ಮೊದಲು ಭಾಗ ಆಗಿದ್ದರೂ ಕೂಡಾ ನಾನು ಸುಳ್ಳಾದ ಪ್ರಸ್ತುತ ದಾವೆಯನ್ನು ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.